ತಾಯಿಯ ಮುಖ ನೋಡಿ, ಗೋಣಲ್ಲಾಡಿಸಿದ. ಒತ್ತಾಯದಿಂದ ಆತನ ಕೈಗೊಂದಿಷ್ಟು ಹಣವನ್ನೂ ಅವರು ನೀಡಿದರು. ಮತ್ತೆ ಹೊರಟುನಿಂತ ಅವರ ಪಾದಗಳಿಗೆ ದೇವಿ ಪುನಃ ವಂದಿಸಿ, ಅವರು ನೋಟದಿಂದ ಮರೆಯಾಗುವ ತನಕವೂ ಹೊರಟು ಹೋದ ದಿಕ್ಕಿನತ್ತ ಒದ್ದೆ ಕಂಗಳಲ್ಲಿ ಅವರತ್ತ ನೋಡುತ್ತಲೇ ಇದ್ದಳು.

★★★

ಊರಿಗೆ ಮರಳಿದ ವಾಸುದೇವರು, ಕೆಲದಿವಸಗಳಲ್ಲೇ ಎಲ್ಲಾ ಆಸ್ತಿ, ಮನೆಯ ಒಡೆತನದ ಉಯಿಲನ್ನು ತನ್ನ ಕಾಲಾನಂತರ ದೇವಿ ಮತ್ತು ಶ್ಯಾಮಸುಂದರನ ಹೆಸರಿಗೆ ಬರೆಸಿದರು. ಒಂದೂವರೆ ಎಕರೆ ಜಾಗವನ್ನು ಹಳ್ಳಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೂ, ಶಾಲೆ ಕಟ್ಟಿಸಿದ್ದ ಸ್ಥಳವನ್ನು ಶಿಕ್ಷಣ ಇಲಾಖೆಗೂ ಬಿಟ್ಟುಕೊಟ್ಟರು. ತಾಯಿತಂದೆಯ ಸ್ಮರಣಾರ್ಥ ಆಶ್ರಮವೊಂದನ್ನು ಸ್ಥಾಪಿಸಲು ಸಾಕಷ್ಟು ಜಾಗ ಮತ್ತು ಹಣವನ್ನು ಪ್ರತ್ಯೇಕ ತೆಗೆದಿರಿಸಿದರು. ಮುಚ್ಚಿಕೊಂಡೇ ಇದ್ದ ಮನೆಯ ಎರಡು ಕೋಣೆಗಳನ್ನು ದುರಸ್ತಿಗೊಳಿಸಿ ಅದಕ್ಕೆ ಹೊಸರೂಪ ಕೊಟ್ಟರು.

ಆಸ್ಪತ್ರೆಯಿಂದ ಮರಳಿ ಬಂದದ್ದೇ ಅವರು ಕೈಗೊಂಡ ಈ ದಿಢೀರ್ ನಿರ್ಧಾರ ಊರ ಜನರಲ್ಲಿ ಬೆರಗು ಮತ್ತು ಅನೇಕ ಪ್ರಶ್ನೆಗಳಿಗೆ ಕಾರಣವಾಯಿತು. ಧೈರ್ಯ ಮಾಡಿ ಕೇಳಿದವರಿಗೆ ಅವರ ಉತ್ತರ ಇಷ್ಟೇ ಆಗಿತ್ತು: "ಜೀವನ ನಮ್ಮಿಂದ ದೂರಾಗಲು ಹೊರಟಾಗ ಮಾತ್ರ ನಮಗೆ ಅದರ ಬೆಲೆ ಅರಿವಾಗುತ್ತದೆ."

ಅಂತೂ ಯಾರು ಏನೇ ಅಂದುಕೊಳ್ಳಲಿ, ಈ ಎಲ್ಲಾ ವ್ಯವಸ್ಥೆ ಮಾಡಿ ಮುಗಿಸಿದ ವಾಸುದೇವರು ಮಾತ್ರ, ನಿರಾಳವಾಗಿ ಬಿಟ್ಟಿದ್ದರು.

ಆ ನಂತರ ಅವರು ದೇವಿ ಮತ್ತು ಶ್ಯಾಮಸುಂದರರು ತೋಟದಳ್ಳಿಗೆ ಬರುವುದನ್ನೇ ಕಾಯತೊಡಗಿದರು.

## ಬಿ. ಮಂಜುನಾಥ ಕಾಮತ್

ಲೇಖಕರು ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನ ಹಾಲಾಡಿಯವರು. ಹಾಲಾಡಿ, ಶಂಕರನಾರಾಯಣ, ಕುಂದಾಪುರಗಳಲ್ಲಿ ವಿದ್ಯಾಭ್ಯಾಸ. ಸಿಂಡಿಕೇಟ್ ಬ್ಯಾಂಕಿನಲ್ಲಿ ಸೇವೆ ಸಲ್ಲಿಸಿ ನಿವೃತ್ತರು.

ಯಕ್ಷಗಾನ, ನಾಟಕ, ಸಾಹಿತ್ಯದ ಕುರಿತು ಆಸಕ್ತಿ. ಪತ್ರಿಕೆಗಳಲ್ಲಿ ಕತೆ, ಕವನ, ಲೇಖನಗಳು ಪ್ರಕಟವಾಗಿವೆ. 'ಮತ್ತೊಂದು ದಿನ ಮತ್ತು ಇತರ ಕತೆಗಳು' ಅವರ ಪ್ರಕಟಿತ ಕಥಾಸಂಕಲನ. 'ಮಯೂರ'ದಲ್ಲಿ ಪ್ರಕಟವಾಗಿದ್ದ ಇದೇ ಹೆಸರಿನ ಕತೆಯಾಧಾರಿತ ಕಿರುಚಿತ್ರ ಬೆಂಗಳೂರು ದೂರದರ್ಶನದಲ್ಲಿ ಪ್ರಸಾರವಾಗಿದೆ.